ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ನೀಡಬೇಕಾದ ಸಹಾಯಧನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 354(246)

ಸದಸ್ಯರ ಹೆಸರು : ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ)

ಉತ್ತರಿಸುವ ಸಚಿವರು : ಶ್ರೀ ಎಸ್.ಆರ್.ಕಾಶಪ್ಪನವರ್(ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಪ್ರಶ್ನೆ

ಅ. ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ನೀಡಬೇಕಾದ ಸಹಯಧನದ ಬಾಕಿ ಮೊತ್ತ ಎಷ್ಟು?

ಆ. ಈ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಉತ್ತರ

ಅ. 30-11-2001ರ ಅಂತ್ಯಕ್ಕೆ ಸುಮಾರು ರೂ.349.56 ಕೋಟಿಗಳು ಸಹಾಯಧನ ನೀಡಲು ಬಾಕಿ ಇರುತ್ತದೆ.

ಆ. ಪೂರ್ಣ ಸಹಾಯಧನ ಬಾಕಿಯನ್ನು ಆದಷ್ಟು ಬೇಗನೆ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಾರರ ತೊಂದರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 355(843)

ಸದಸ್ಯರ ಹೆಸರು : ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ)

ಸಚಿವರ ಹೆಸರು ಪದನಾಮ : ಶ್ರೀ ಎಂ.ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು)

ಪ್ರಶ್ನೆ

ಅ. ರಾಜ್ಯಕ್ಕೆ ಇತ್ತೀಚೆಗೆ ಹೆಚ್ಚು ಅಕ್ರಮವಾಗಿ ಚೈನಾ ರೇಷ್ಮೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ. ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಇದರಿಂದಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಈ ತೊಂದರೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಮಾರ್ಗೋಪಾಯಗಳೇನು?

ಉ. ರೇಷ್ಮೆ ಬೆಳೆಗಾರರು ಪೆಬ್ರಿನ್, ಸುಣ್ಣಕಟ್ಟು ಮತ್ತು ಊಜಿ ರೋಗದಿಂದ ಸಂಕಷ್ಟಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ. ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಉತ್ತರ

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಸಾಂಪ್ರದಾಯಿಕ ಜಿಲ್ಲೆಗಳ ಕೆಲವು ರೇಷ್ಮೆ ಬೆಳೆಗಾರರು ಹೊರರಾಜ್ಯದ ಮೊಟ್ಟೆಗಳನ್ನು ಪಡೆದು ತಂದಿದ್ದು ಅದರಲ್ಲಿ ಗಂಟು ರೋಗ ಕಂಡುಬಂದಿದ್ದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆ. ಹವಾಮಾನ ವೈಪರೀತ್ಯದಿಂದ ಸುಣ್ಣಕಟ್ಟು ರೋಗದ ಹಾವಳಿ ಸ್ವಲ್ಪ ಮಟ್ಟಿಗೆ ಕಂಡು ಬಂದಿದೆ.

ಊ.1) ವಿಜ್ಞಾನಿಗಳ ಮತ್ತು ಅಧಿಕಾರಿಗಳ ತಂಡವನ್ನು ರಚಿಸಿ ರೇಷ್ಮೆ ಬೆಳೆಗಾರರ ಬೆಳೆ ವೀಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ.

2) ಆಂಧ್ರಪ್ರದೇಶದ ರೇಷ್ಮೆ ಇಲಾಖೆಯ ನಿರ್ದೇಶಕರಿಗೆ ನಮ್ಮ ರಾಜ್ಯದ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಮೊಟ್ಟೆಗಳನ್ನು ಸರಬರಾಜು ಮಾಡದಂತೆ ಪತ್ರ ಬರೆದು ಕೋರಲಾಗಿದೆ.

3) ಜಿಲ್ಲಾವಾರು ರೇಷ್ಮೆ ಬೆಳೆಗಳ ಪರಿವೀಕ್ಷಣೆಗೆ ವಿಜ್ಞಾನಿಗಳು ಮತ್ತು ಅಧಿಕಾರಿಗಳ ತಂಡಗಳನ್ನು ರಚಿಸಲಾಗಿದೆ.

4) ಸುಣ್ಣಕಟ್ಟು ರೋಗ ಮತ್ತು ಊಜಿ ಹಾವಳಿ ನಿಯಂತ್ರಿಸಲು ರೇಷ್ಮೆ ಬೆಳೆಗಾರರಿಗೆ ಕರಪತ್ರಗಳು: ತರಬೇತಿ ಶಿಬಿರಗಳು ಮತ್ತು ತಾಂತ್ರಿಕ ಸೇವಾ ಕೇಂದ್ರಗಳ ಅಧಿಕಾರಿಗಳ ಮೂಲಕ ತಿಳುವಳಿಕೆ ನೀಡಲಾಗಿದೆ.

5) ಸೋಕು ನಿವಾರಕಗಳನ್ನು ಇಲಾಖಾವತಿಯಿಂದ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ರೈತರಿಗೆ ಸರಬರಾಜು ಮಾಡಿ ರೋಗ ನಿಯಂತ್ರಣ ಕ್ರಮಗಳನ್ನು ಪಾಲಿಸಲಾಗುತ್ತಿದೆ.

ಪ್ರಸುತ್ತ ರೋಗಗಳು ಪರಿಣಾಮಕಾರಿಯಾಗಿ ಹತೋಟಿಗೆ ಬಂದಿದೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 356(844)

ಸದಸ್ಯರ ಹೆಸರು : ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ)

ಉತ್ತರಿಸುವ ಸಚಿವರು : ಶ್ರೀ ಬಿ.ರಮಾನಾಥರೈ (ಮೀನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) 2001-2002ನೇ ಸಾಲಿನಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಹಣ ಬಿಡುಗಡೆ ಮಾಡಿದೆ?

ಆ) ನಿಗಮ ಅಭಿವೃದ್ಧಿಪಡಿಸಲು ನಬಾರ್ಡ್‌ನಿಂದ ಹಣವನ್ನು ಸಾಲ ಪಡೆಯಲಾಗಿದೆಯೇ?

ಇ) ಇದುವರೆವಿಗೂ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಮಂಜೂರಾಗಿದೆ?

ಈ) ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? ವಿವರ ನೀಡುವುದು, ಇದಕ್ಕೆ ಮಂಜೂರು ಮಾಡಲಾಗದ ಪ್ರತಿಕಾಮಗಾರಿಯ ಹಣವೆಷ್ಟು? (ವಿವರ ನೀಡುವುದು)